ತಲೆತಲಾಂತರಗಳಿಂದ ಬಂದ ನಂಬಿಕೆ.

ಈ ನೃತ್ಯಗಳಿಗಾಗಿಯೇ ಬಾರಿಸುವ ವಿಶೇಷ ತಾಳ, ಮದ್ದಳೆ ಮತ್ತು ಕಂಸಾಳೆಗಳಿಂದ ಒಡಗೂಡಿದ ವಿಶಿಷ್ಟ ಸಂಗೀತವು, ಕೆಟ್ಟ ಶಕುನ, ದೆವ್ವ ಭೂತಗಳ ಕಾಟ ಮತ್ತು ಸಂಭಾವ್ಯ ದುರಾದೃಷ್ಟಗಳನ್ನು ಹೊಡೆದೋಡಿಸುತ್ತವೆ ಎಂದು ಚೀನೀಯರು ನಂಬುತ್ತಾರೆ. ಸಿಂಗಾಪುರದ 'ಚೈನಾ ಟೌನ್' ನ ಬೀದಿಗಳಲ್ಲಿ, ಹೊಸ ವರ್ಷದ ಸ್ವಾಗತಕ್ಕಾಗಿ ಈ ಎಲ್ಲ ಸಿದ್ಧತೆಗಳಲ್ಲದೆ, ಕಣ್ಣುಕುಕ್ಕುವ ವರ್ಣರಂಜಿತ ಬೆಳಕಿನ ಅಲಂಕಾರವು ನೋಡುಗರ ಕಣ್ಣಿಗೆ ಹಬ್ಬವನ್ನುಂಟು ಮಾಡುತ್ತವೆ. ಇಡೀ ಸಿಂಗಾಪುರ ನಗರ , ಹೊಸ ವರ್ಷವನ್ನು ಸ್ವಾಗತಿಸಲು, ಕೆಂಪು ಬಣ್ಣದ ಉಡುಗೆ ತೊಟ್ಟು, ಸಿಂಗಾರಗೊಂಡ ನವ ವಧುವಿಂತೆ ಕಾಣಿಸುತ್ತಿತ್ತು.



ಹಿಂದೆ ಕೃಷಿ ಪ್ರಧಾನವಾಗಿದ್ದ ಚೀನಾದಲ್ಲಿ ಕೃಷಿಕರು, ಹೊಸ ವರ್ಷದ ಸ್ವಾಗತಕ್ಕಾಗಿ, ತಮ್ಮ ಹೊಲಗದ್ದೆಗಳನ್ನು ಮತ್ತು ಕೃಷಿ ಉಪಕರಣಗಳನ್ನು ಸಿಂಗರಿಸುತ್ತಿದ್ದರಂತೆ. ಆದರೆ ಈಗ ಉದ್ಯಮ ಪ್ರಧಾನವಾದ ಸಿಂಗಾಪುರದಲ್ಲಿ ವ್ಯಾಪಾರ ಮಳಿಗೆಗಳು, ಪ್ರವಾಸಿ ಆಕರ್ಷಣೆಯ ತಾಣಗಳು, ಮುಖ್ಯ ಬೀದಿಗಳು ಸಿಂಗಾರಗೊಳ್ಳುತ್ತವೆ. ಕೆಂಪು ಬಣ್ಣವು, ಚೀನೀಯರಿಗೆ ಶುಭ ಮತ್ತು ಸಮೃದ್ಧಿ ತರುವ ಬಣ್ಣವಾದ್ದರಿಂದ, ಕೆಂಪು ಬಣ್ಣದ ಅನಾನಸ್ ಮತ್ತು ಕಿತ್ತಳೆ ಹಣ್ಣುಗಳ ಆಕಾರದ ಆಕಾಶ ಬುಟ್ಟಿಗಳಿಗೆ ಭಾರೀ ಬೇಡಿಕೆ. ಅವುಗಳನ್ನು ಚೀನೀ ದೇವಾಲಯಗಳು, ಮನೆಗಳು, ಅ.ಗಡಿ ಮುಂಗಟ್ಟುಗಳು, ರೈಲ್ವೆ ನಿಲ್ದಾಣ ಹಾಗೂ ದಾರಿಯ ತುಂಬ ತೋರಣದಂತೆ ಕಟ್ಟಲಾಗಿತ್ತು. ನೋಡುವವರ ಕಣ್ಣಿಗಂತೂ ಸ್ವಪ್ನಲೋಕವೇ ಧರೆಗಿಳಿದಂತೆ.

ಚೈನಾ ಟೌನಲ್ಲಿರುವ ಬುದ್ಧ ಟೂತ್ ರಲಿಕ್ ಮಂದಿರ ಹಾಗೂ ಮ್ಯೂಸಿಯಂ

## ಹೊಸ ವರ್ಷದ ಮುನ್ನಾ ದಿನ

ಹೊಸ ವರ್ಷದ ಆಚರಣೆಯ ಬಗ್ಗೆ, ಚೀನೀ ದಂತಕಥೆಗಳಲ್ಲಿ ಒಂದು ಕುತೂಹಲಕಾರಿ ಉಲ್ಲೇಖವಿದೆ. ಸಮುದ್ರವಾಸಿಗಳಾಗಿದ್ದ ನೀಆನ್ ಎಂಬ ಸಿಂಹದ ತಲೆ ಮತ್ತು ಎತ್ತಿನ ದೇಹವುಳ್ಳ, ದೈತ್ಯಾಕಾರದ ಒಂದು ಪೌರಾಣಿಕ ಪ್ರಾಣಿಯು, ಪ್ರತಿ ವರ್ಷದ ಮುನ್ನಾ ದಿನದಂದು, ಸಮುದ್ರದಿಂದ ಹೊರ ಬಂದು ಜನ, – ಜಾನುವಾರು, ಮನೆ ಮತ್ತು ಬೆಳೆಗಳನ್ನು ಸರ್ವನಾಶ ಮಾಡುತ್ತಿತ್ತಂತೆ. ಉಪದ್ರವಿ ನೀಆನ್ನಿನ ಕಾಟಕ್ಕೆ ಬೇಸತ್ತ ಭಯಭೀತ ಜನ, ಅದನ್ನು ದೂರವಿಡಲು ಉಪಾಯ ಹುಡುಕತೊಡಗಿದರು. ಹೀಗಿರುವಾಗ ಒಂದು ದಿನ ಅಚಾನಕ್ಕಾಗಿ ನೀಆನ್ ಕೆಂಪು ಬಣ್ಣ ಕಂಡು ಭೀತಿ ಪಟ್ಟದ್ದೇ ಅಲ್ಲದೆ, ಕಿವಿಗಡಚಿಕ್ಕುವ ಸದ್ದುಗದ್ದಲಕ್ಕೆ ಹೆದರಿ ಓಡಿಹೋಗುತ್ತದೆ ಎಂಬ ರಹಸ್ಯ ಜನರಿಗೆ ತಿಳಿದು ಹೋಯಿತು. ನೀಆನನ್ನು ದೂರವಿಡಲು ಜನ ತಮ್ಮ ಮನೆಗಳ ಮುಂದೆ, ಬಾಗಿಲುಗಳ ಮೇಲೆ, ಕೆಂಪು ಕಾಗದದ ಚಿನ್ಹೆಗಳನ್ನು ಹಚ್ಚುವುದು ಹಾಗೂ ಕೆಂಪು ಬಣ್ಣದ ಕಂದೀಲುಗಳನ್ನು ತೂಗುಬಿಡುವದನ್ನು ರೂಢಿ ಮಾಡಿಕೊಂಡರು. ಇಷ್ಟೇ ಅಲ್ಲ, ಜೋರಾದ ಶಬ್ದಕ್ಕಂಜುವ ನೀಆನನ್ನು ಅಂಜಿಸಿ ಓಡಿಸಲು ಪಟಾಕಿಗಳನ್ನು ಹಾರಿಸತೊಡಗಿದರು. ಈ ಎಲ್ಲ, ಮುಂಜಾಗರೂಕತೆಗಳ ಫಲವಾಗಿ ನೀಆನ್ ಹಾವಳಿ ನಿಂತುಹೋಯಿತು. ನೀಆನ್ ಸಂಪೂರ್ಣವಾಗಿ ಕಣ್ಮರೆಯಾಯಿತು! ಈ ಸಂದರ್ಭವನ್ನು ವರ್ಷಕ್ಕೊಮ್ಮೆ ಆಚರಿಸುವ ಸಂಪ್ರದಾಯ ಬೆಳೆದು ಬಂದು, ಹೊಸ ವರ್ಷದ ಹಬ್ಬವಾಗಿ ಆಚರಣೆ ರೂಪುಗೊಂಡಿತು.

ಹೊಸ ವರ್ಷದ ಮುನ್ನಾ ದಿನದಂದು, ಮನೆ ಮನೆಗಳಲ್ಲಿ, ಆಕರ್ಷಕ ಕೆಂಪು ಕಂದೀಲುಗಳನ್ನು ಹಚ್ಚುತ್ತಾರೆ. ಮುಂಬಾಗಿಲಿನ ಮೇಲೆ, ಎರಡು ವಿಶೇಷ ಬಾಗಿಲುಗಳಲ್ಲಿ –ದೇವರುಗಳ ಚಿತ್ರಗಳನ್ನು ಅಂಟಿಸುತ್ತಾರೆ. ಈ ದೇವದ್ವಯರು, ದುಷ್ಟ ಶಕ್ತಿಗಳು ಮನೆಯನ್ನು ಪ್ರವೇಶಿಸದಂತೆ ತಡೆಯುತ್ತಾರೆಂದು ಚೀನೀಯರು ನಂಬುತ್ತಾರೆ. ಇವುಗಳಲ್ಲದೇ,



ಹೊಸ ವರ್ಷದ ಅಲಂಕಾರಕ್ಕೆ ಹೊಸ ವಸ್ತುಗಳು